ಕಾರ್ಯಕಾರಿ ಸಾರಾಂಶ

1. ಪ್ರಸ್ತಾವನೆ

ಕೇರಳ ಸರಕಾರ, ವೈಡ್, ಜಿ.ಒ.(ಎಂ.ಎಸ್.) ನಂ.19/2009/ಐಡಿ/ದಿನಾಂಕ 7-2-2009 ಮತ್ತು ಜಿ.ಒ.ನಂ.36/2011/ಐಡಿ/ ದಿನಾಂಕ 11-2-2011ರಂತೆ ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲೂಕಿನ ಚೀಮೇನಿ ಗ್ರಾಮದಲ್ಲಿ 1200 ಮೆ.ವಾ. ಸಂಯುಕ್ತ ಮರುಸಂಸ್ಕರಿತ ವಿದ್ಯುತ್ ಸ್ಥಾವರ (ಸಿಸಿಪಿಪಿ) ಆರಂಭಿಸಲು ಕೇರಳ ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಡಿಸಿ)ಗೆ ಅಧಿಕಾರ ನೀಡಿದೆ . ಕೇರಳ ಸರಕಾರ, ವೈಡ್, ಜಿ.ಒ. ಕಾಸರಗೋಡು ಜಿಲ್ಲಾಧಿಕಾರಿಗೆ ಸರಕಾರಿ ಜಾಗವನ್ನು ಪ್ರಸ್ತಾಪಿತ ಉದ್ದೇಶಕ್ಕೆ ನೀಡಲು ಅಧಿಕಾರ ನೀಡಲಾಗಿದೆ.

2. ಯೋಜನೆ ಮತ್ತು ಯೋಜನಾಕರ್ತರ ಪರಿಚಯ

ಪ್ರಸ್ತಾಪಿತ ವಿದ್ಯುತ್ ಸ್ಥಾವರವು ಅನಿಲಾಧಾರಿತ ಸಿಸಿಪಿಪಿ ಆಗಿದೆ. ಪ್ರಸ್ತಾಪಿತ ವಿದ್ಯುತ್ ಯೋಜನೆಯ ವಿವರಗಳನ್ನು ಪಟ್ಟಿ1ರಲ್ಲಿ ಕೊಡಲಾಗಿದೆ.

ಪಟ್ಟಿ 1

ಪ್ರಸ್ತಾಪಿತ ಯೋಜನೆಯ ವಿವರಗಳು

ಕ್ರಮ ಸಂಖ್ಯೆ	ಯೋಜನೆಯ ರೀತಿ	ಸಾಮರ್ಥ್ಯ	ಒಟ್ಟು ವಿದ್ಯುತ್
1	ಸಂಯುಕ್ತ ಮರುಸಂಸ್ಕರಿತ ವಿದ್ಯುತ್ ಯೋಜನೆ	3X400 ಮೆ.ವಾ.	1200 ಮೆ.ವಾ.

3. ಪ್ರಸ್ತಾಪಿತ ಯೋಜನೆಯ ಆವಶ್ಯಕತೆ

ಕೇರಳದಲ್ಲಿ ವಿದ್ಯುತ್ ಬೇಡಿಕೆಯು ಹೆಚ್ಚುತ್ತಲೇ ಇದೆ. ಕೇರಳದ ಶೇ.50ರಷ್ಟು ವಿದ್ಯುತ್ ಬೇಡಿಕೆಯನ್ನು ರಾಜ್ಯದಲ್ಲಿರುವ ಜಲ ವಿದ್ಯುದಾಗಾರಗಳಿಂದ ಈಡೇರಿಸಲಾಗುತ್ತದೆ . ಆದರೆ ಜಲ ವಿದ್ಯುದಾಗಾರಗಳಿಂದ ಸಿಗುವ ವಿದ್ಯುತ್ ಮಳೆಯನ್ನು ಅವಲಂಬಿಸಿದೆ. ಮಳೆ ಕಡಿಮೆಯಾದರೆ ವಿದ್ಯುತ್ ಉತ್ಪಾದನೆಯೂ ಕಡಿಮೆಯಾಗುತ್ತದೆ. ವಿದ್ಯುತ್ ಬೇಡಿಕೆಯನ್ನು ಸರಿದೂಗಿಸಲು ರಾಜ್ಯ ಸರಕಾರವು ಕೇಂದ್ರ ವಲಯದಿಂದ ಸಿಗುವ ವಿದ್ಯುತ್ತನ್ನು ಅವಲಂಬಿಸಿದೆ. ಮೇಲಿನ ವಿಚಾರಗಳನ್ನು ಪರಿಗಣಿಸಿ ಹಾಗೂ ಮುಂದಕ್ಕೆ ನಿರಂತರವಾಗಿ ಸಾಕಷ್ಟು ವಿದ್ಯುತ್ತನ್ನು ಪೂರೈಸುವಂತಾಗಲು ಕೇರಳದಲ್ಲಿ ಸೂಕ್ತವಾದ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸುವುದು ಅಗತ್ಯವಾಗಿದೆ.

ಆದ್ದರಿಂದ ಕೇರಳ ಸರಕಾರವು ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು 1200 ಮೆ.ವಾ. ಸಾಮರ್ಥ್ಯದ ವಿದ್ಯುತ್ ಯೋಜನೆಯನ್ನು ಕೆಎಸ್ಐಡಿಸಿ ಮುಖಾಂತರ ಅನುಷ್ಠಾನಿಸಲು ನಿರ್ಧರಿಸಿದೆ. ಕೆಎಸ್ಐಡಿಸಿ ಮತ್ತು ಕೇರಳ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ (ಕೆಎಸ್ಇಬಿ)ಗಳು ಕೇರಳ ಸರಕಾರದ ಅಂಗೀಕಾರದೊಂದಿಗೆ ಸ್ಪೆಷಲ್ ಪರ್ಪಸ್ ವೆಹಿಕಲ್(ಎಸ್‌ಪಿವಿ) ರೂಪಿಸಲಿವೆ. ಇದರಲ್ಲಿ ಕೆಎಸ್ಐಡಿಸಿ ಮತ್ತು ಕೆಎಸ್ಇಬಿಗಳು 50:50 ಪಾಲು ಹೊಂದಲಿವೆ. ಇದರ ಜತೆಗೇ ಈ ಯೋಜನೆಯ ಕುರಿತಂತೆ ನಿರ್ಧಾರ ತೆಗೆದುಕೊಳ್ಳಲು ಕೇರಳ ಸರಕಾರವು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯೊಂದನ್ನು ರಚಿಸಿದೆ.

ಪಟ್ಟಿ 2

ಪ್ರಸ್ತಾಪಿತ ಯೋಜನಾ ಸ್ಥಳದ ಗುಣಲಕ್ಷಣಗಳು

ವಿಷಯ	ವಿವರಗಳು
ಸ್ಥಳ	ಚೀಮೇನಿ ಗ್ರಾಮ, ಹೊಸದುರ್ಗ ತಾಲೂಕು, ಕಾಸರಗೋಡು ಜಿಲ್ಲೆ, ಕೇರಳ
ಭೌಗೋಳಿಕ ಪರಿಸರ	ಉತ್ತರದಲ್ಲಿ 12ಡಿಗ್ರಿ 13' 44'' ಮತ್ತು ಪೂರ್ವದಲ್ಲಿ 75ಡಿಗ್ರಿ 15' 10''
ಎಂಎಸ್ಎಲ್‌ಗಿಂತ ಮೇಲೆತ್ತರ	80-100 ಮೀಟರ್‌ಗಳು
ಅಗತ್ಯವಿರುವ ಜಾಗ	200 ಎಕ್ರೆಗಳು (80.97 ಎಚ್‌ಎ) ಅಂದರೆ 81 ಎಚ್‌ಎ
ಪ್ರಸಕ್ತ ಭೂ ಬಳಕೆ	ಸರಕಾರಿ ಜಾಗ, ಸಣ್ಣ ಮನೆಗಳು (8-10 ಸಂಖ್ಯೆಯ ಮನೆಗಳು) , (-)ದಟ್ಟ ಪೊದೆಗಳು
ಮಣ್ಣಿನ ಮಾದರಿ	ಕೆಂಪು ಮಣ್ಣು
ಭೂಪ್ರದೇಶ ಮಾದರಿ	ಏರು ತಗ್ಗುಗಳಿಂದ ಕೂಡಿದ ಪ್ರದೇಶ. 60%ದಿಂದ 70% ಜಾಗ ವರ್ಗೀಕೃತಗೊಳ್ಳಬೇಕಾಗಿದೆ.
ಪ್ರಮುಖ ಗಾಳಿಯ ದಿಕ್ಕು	ಪ್ರಮುಖವಾಗಿ ಗಾಳಿ ಬೀಸುವ ದಿಕ್ಕು ಪಶ್ಚಿಮದಿಂದ ಪೂರ್ವ. ಮತ್ತು ಈಶಾನ್ಯದಿಂದ ನೈರುತ್ಯ
ಹತ್ತಿರದ ಹೆದ್ದಾರಿ	ವಾಯುವ್ಯದಲ್ಲಿ ರಾ.ಹೆ. 17 (12 ಕಿ.ಮೀ.)
ಹತ್ತಿರದ ಪ್ರಮುಖ ರೈಲು ನಿಲ್ದಾಣ	ಪಶ್ಚಿಮದಲ್ಲಿ ಚೆರ್ವತ್ತೂರು ರೈಲ್ವೆ ನಿಲ್ದಾಣ (13 ಕಿ.ಮೀ)
ಹತ್ತಿರದ ವಿಮಾನ ನಿಲ್ದಾಣ	ವಾಯುವ್ಯದಲ್ಲಿ ಮಂಗಳೂರು (125 ಕಿ.ಮೀ)
ಹತ್ತಿರದ ಬಂದರು	ಅಜಿಕ್ಕಲ್ ಬಂದರು – ಪಶ್ಚಿಮದಲ್ಲಿ (60 ಕಿ.ಮೀ)
ಹತ್ತಿರದ ಗ್ರಾಮ	ಕುಂಡ್ಯಾರ – ಈಶಾನ್ಯ(0.5ಕಿ.ಮೀ.) ಮುಕ್ಕಡ ಉತ್ತರ (1.0ಕಿ.ಮೀ)ಮತ್ತು ಪೊಡವೂರು –ವಾಯುವ್ಯ (1.0 ಕಿ.ಮೀ)
ಹತ್ತಿರದ ಪಟ್ಟಣ /ನಗರ	ಹೊಸದುರ್ಗ (20 ಕಿ.ಮೀ)

ಗುಡ್ಡ/ ಕಣಿವೆ	ಪಶ್ಚಿಮ ಘಟ್ಟಗಳು ಪೂರ್ವ ದಿಕ್ಕಿನಲ್ಲಿ 4 ಕಿ.ಮೀ. ದೂರದಲ್ಲಿವೆ
ಭೌಗೋಳಿಕ ಸ್ಥಿತಿ	ಸ್ವಲ್ಪ ಭಾಗ ಬಂಜರು ಮತ್ತು ಸ್ವಲ್ಪ ಭಾಗ ತೋಟಗಳಿಂದ ತುಂಬಿದ ಸಮತಟ್ಟು ಜಾಗ
ಸ್ಮಾರಕಗಳು	25 ಕಿ.ಮೀ ಸುತ್ತಳತೆಯಲ್ಲಿ ಯಾವುದೇ ಪ್ರಮುಖ ಸ್ಮಾರಕಗಳಿಲ್ಲ
ಪ್ರಾಕ್ತನ ಮಹತ್ವದ ಸ್ಥಳಗಳು	ಪ್ರಸ್ತಾಪಿತ ಯೋಜನಾ ಸ್ಥಳದ 25 ಕಿ.ಮೀ. ಸುತ್ತಳತೆಯಲ್ಲಿ ಯಾವುದೇ ಪ್ರಮುಖ ನೋಂದಾಯಿತ ಪ್ರಾಕ್ತನ ಮಹತ್ವ ಹೊಂದಿರುವ ತಾಣವಿಲ್ಲ
ರಾಷ್ಟ್ರೀಯ ಉದ್ಯಾನಗಳು	25 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ರಾಷ್ಟ್ರೀಯ ಉದ್ಯಾನವಿಲ್ಲ
ಅರಣ್ಯಗಳು	ಎಳೇರಿ ರಕ್ಷಿತಾರಣ್ಯ ಉತ್ತರ (4 ಕಿಮೀ), ಕಿನಾನುರ್ ರಕ್ಷಿತಾರಣ್ಯ ಉತ್ತರ (11 ಕಿಮೀ)
ಭೂಕಂಪನ	ಅಧ್ಯಯನ ಪ್ರದೇಶವು ಭೂಕಂಪ ವಲಯ– 3ರಡಿ ಬರುತ್ತದೆ.
ನದಿ/ತೊರೆಗಳು	ಕರಿಯಂಗಾಡ್ ನದಿ – ಉತ್ತರ (0.8 ಕಿ.ಮೀ.)
ಹತ್ತಿರದ ಸಮುದ್ರ	ಅರೇಬಿಯನ್ ಸಮುದ್ರ – ಪಶ್ಚಿಮ (15 ಕಿ.ಮೀ)

ಪಟ್ಟಿ 3

ಪ್ರಸ್ತಾಪಿತ 3 x 400 ಮೆ.ವಾ. ಸಾಮರ್ಥ್ಯದ ಅನಿಲಾಧಾರಿತ ವಿದ್ಯುತ್ ಯೋಜನೆಯ ತಾಂತ್ರಿಕ ವಿವರಗಳು

ಸಾಧನಗಳು	**ವಿವರ**	
ಸ್ಥಾವರದ ಹೆಸರು	ಚೀಮೇನಿ ವಿದ್ಯುತ್ ಯೋಜನೆ	
ಘಟಕಗಳ ಸಂಖ್ಯೆ	3X 400	
ಗ್ಯಾಸ್ ಟರ್ಬೈನ್	3 ಸಂಖ್ಯೆ	
ಎಚ್ಆರ್ಎಸ್ಜಿ	3 ಸಂಖ್ಯೆ	
ಶೀತಲ ಜಲ ವ್ಯವಸ್ಥೆ	ಇಂಡ್ಯೂಸ್ಡ್ ಡ್ರಾಫ್ಟ್ ಕೂಲಿಂಗ್ ಟವರ್ 3 ಸಂಖ್ಯೆ	
ನಿಯಂತ್ರಣ ಕ್ರಮಗಳು	ಲೋ $N0_x$ ಬರ್ನರ್ಸ್	
ಅನಿಲ ಬಳಕೆ	ದಿನಕ್ಕೆ 5.11 ಮಿಲಿಯ ಮೀಟರ್ ಸ್ಟಾಂಡರ್ಡ್ ಕ್ಯೂಬಿಕ್ ಮೀಟರ್	
ನೀರಿನ ಅವಶ್ಯಕತೆ	ಆಯ್ಕೆ 1: (ನದಿಯಿಂದ ಶುದ್ಧ ನೀರು) 3480 ಎಂ^{3} /ದಿನವಹಿ	ಆಯ್ಕೆ2: (ಸಮುದ್ರ ನೀರು) 101328m^3/ದಿನವಹಿ(~101400 m^3/ದಿನವಹಿ) (97920m^3/ ದಿನವಹಿ ಸಮುದ್ರದಿಂದ ವೆಟ್ ಕಂಡೆನ್ಸರ್ ಮಾದರಿಗೆ +3408m^3/ದಿನವಹಿ ಇತರ ಮಾದರಿಯ ಸಂಸ್ಕರಿತ ನೀರಿಗೆ)
ತ್ಯಾಜ್ಯ ಪ್ರಮಾಣ	ಆಯ್ಕೆ 1: (ನದಿಯಿಂದ ಶುದ್ಧ ನೀರು) 490 m^3 /ದಿನವಹಿ (ಈಟಿಪಿಗೆ 440 m^3 / ದಿನವಹಿ ಮತ್ತು ಎಸ್ಟಿಪಿಗೆ 50m^3 /ದಿನವಹಿ)	ಆಯ್ಕೆ2: (ಸಮುದ್ರ ನೀರು) 64608m^3/ದಿನವಹಿ (ಔಟ್ಫಾಲ್ ಸಂಪ್ ಸೀ ಡಿಸ್ಪೋಸಲ್‌ಗೆ 64212m^3/ದಿನವಹಿ, ಮತ್ತು ಕೊಳಚೆಗುಂಡಿ/ಇಟಿಪಿಗೆ 346m^3/ದಿನವಹಿ , ಎಸ್ಟಿಪಿಗೆ 346m^3/ದಿನವಹಿ)
ಒಟ್ಟು ಯೋಜನಾ ವೆಚ್ಚ	ರೂ. 4756.37 ಕೋಟಿ. (4.0 ಕೋ/ಮೆ. ವಾ.)	
ಇಎಂಪಿ ವೆಚ್ಚ	ರೂ. 142 ಕೋ. (ಒಟ್ಟು ಯೋಜನಾ ವೆಚ್ಚದ ಶೇ.3)	

4. ಮೂಲಭೂತ ಆವಶ್ಯಕತೆಗಳು

ಭೂಮಿ

ಪ್ರಸ್ತಾಪಿತ ವಿದ್ಯುತ್ ಯೋಜನೆಯ ವಿವಿಧ ಕಾರ್ಯಗಳಿಗಾಗಿ ಬೇಕಾಗುವ ಜಾಗದ ವಿವರ ಇಲ್ಲಿ ನೀಡಲಾಗಿದೆ.

ಪಟ್ಟಿ 4
ಭೂಭಾಗದ ವಿವರ

ಕ್ರ.ಸಂ.	ಸೌಲಭ್ಯಗಳು	1200 ಮೆವಾ ಸಿಸಿಪಿಪಿ ಎಕ್ರೆಗಳು	ಎಚ್‌ಎ
ಎ.	**ಸ್ಥಾವರ ಪ್ರದೇಶ**		
1.	ಮುಖ್ಯ ವಿದ್ಯುತ್ ಬ್ಲಾಕ್	10.50	4.25
2.	400 ಕೆವಿ ಸ್ವಿಚ್‌ಯಾರ್ಡ್	13.00	5.26
3.	ಕೂಲಿಂಗ್ ಟವರ್ಸ್, ವಾಟರ್ ಸ್ಟೋರೇಜ್ ಮತ್ತು ಟ್ರೀಟ್‌ಮೆಂಟ್ ಪ್ಲಾಂಟ್	7.00	2.83
4.	ಗ್ಯಾಸ್ ಸಪ್ಲೈ ಸ್ಟೇಶನ್	3.00	1.22
5.	ಇತರ ಕಟ್ಟಡಗಳು ಮತ್ತು ರಚನೆಗಳು , ರಸ್ತೆ , ಕಟ್ಟಡಗಳ ನಡುವಿನ ಅಂತರ ಸೇರಿ	30.00	12.15
	ಮೊತ್ತ	**63.50**	**25.71**
	ಬಿ. ಸ್ಥಾವರಕ್ಕಿಂತ ಹೊರ ಪ್ರದೇಶ		
6.	ಮಳೆನೀರು ಇಂಗುವಿಕೆ ಮತ್ತು ಶೋಧನಾ ಗುಂಡಿ	11.00	4.45
7.	ಹಸಿರು ಪಟ್ಟಿ ಪ್ರದೇಶ , ನಿವೇಶನಕ್ಕಾಗಿ ಬೇಕಾದ ಜಾಗವೂ ಸೇರಿ	98.00	39.68
8.	ಭವಿಷ್ಯದ, ವಿಸ್ತರಣೆಗಾಗಿ ಜಾಗ	21.00	8.50
9.	ಕಾಲನಿ	6.50	2.63
	ಮೊತ್ತ	**136.50**	**55.26**
	ಒಟ್ಟು ಮೊತ್ತ (ಎ ಮತ್ತು ಬಿ ಸೇರಿ)	**200.00**	**80.97**

ಇಂಧನ

ಪ್ರಸ್ತಾಪಿತ ಯೋಜನೆಗೆ ಬೇಕಿರುವ ಮೂಲ ಕಚ್ಚಾ ವಸ್ತು ನೈಸರ್ಗಿಕ ಅನಿಲ. ಸಿಸಿಪಿಪಿಗೆ ಬೇಕಿರುವ ನೈಸರ್ಗಿಕ ಅನಿಲವು ಗೈಲ್‌ನ ಪ್ರಸ್ತಾಪಿತ ಪೈಪ್‌ಲೈನ್ ಯೋಜನೆಯಿಂದ ದೊರಕಲಿದೆ. ಈ ಪೈಪ್‌ಲೈನ್ ಯೋಜನೆಯು ಮಂಗಳೂರಿನಿಂದ ಕೊಚ್ಚಿಗೆ ಸಂಪರ್ಕಿಸುವ ದಕ್ಷಿಣ ಭಾರತ ಪ್ರದೇಶಕ್ಕೆ ಸೇರಿದ್ದು. ಮಂಗಳೂರಿನಿಂದ ಕೊಚ್ಚಿಗೆ ಪೈಪ್‌ಲೈನ್‌ನಿಂದ ಸಂಪರ್ಕವೊಂದು ಇದಕ್ಕೆ ಬೇಕಾಗುತ್ತದೆ. ಬೇಕಾಗುವ ಇಂಧನ ಆವಶ್ಯಕತೆಯನ್ನು ಕೆಳಗೆ ನೀಡಲಾಗಿದೆ.

ಪಟ್ಟಿ 5
ಇಂಧನ ಆವಶ್ಯಕತೆಯ ವಿವರ

ಇಂಧನ	ಪ್ರಮಾಣ	ಕ್ಯಾಲೋರಿಫಿಕ್ ಮೌಲ್ಯ	ಮೂಲ
ನೈಸರ್ಗಿಕ ಅನಿಲ	5.11 ಎಂಎಸ್‌ಸಿಎಂಡಿ (1.33ಎಂಟಿಪಿಎ. ಪಿಎಲ್‌ಎಫ್‌ನ 85 ಶೇ.)	8829ಕೆಸಿಎಎಲ್/sm^3	ಗೈಲ್ –ಕೊಚ್ಚಿಯಿಂದ ಮಂಗಳೂರಿಗೆ ಇರುವ ಪೈಪ್‌ಲೈನ್‌ನಿಂದ ಸ್ಥಾವರ ಪ್ರದೇಶಕ್ಕೆ ಸಂಪರ್ಕಲೈನ್

ನೀರು

ಸ್ಥಾವರಕ್ಕೆ ಬೇಕಾಗುವ ನೀರಿನ ಗುಣಮಟ್ಟವನ್ನು ಆಧರಿಸಿ ಎರಡು ಬಗೆಯ ನೀರಿನ ಮೂಲಗಳನ್ನು ಗುರುತಿಸಲಾಗಿದೆ. ವಿದ್ಯುತ್ ಉತ್ಪಾದನೆಯಲ್ಲಿ ಬಳಸಲಾಗುವ ಕಂಡೆನ್ಸರ್ ಕೂಲಿಂಗ್ ವ್ಯವಸ್ಥೆ ಮತ್ತು ಗುರುತಿಸಲ್ಪಟ್ಟ ನೀರಿನ ಮೂಲದಲ್ಲಿ ಲಭ್ಯವಿರುವ ಪ್ರಮಾಣವನ್ನು ಅನುಸರಿಸಿ ಯಾವುದಾದರೊಂದು ಮೂಲದಿಂದ ನೀರನ್ನು ಬಳಸಲಾಗುವುದು. ಯೋಜನಾಕರ್ತರು ತಮಗೆ ಯಾವ ಕಂಡೆನ್ಸರ್ ಕೂಲಿಂಗ್ ವ್ಯವಸ್ಥೆ ಬೇಕೆಂದು ಆಯ್ಕೆ ಮಾಡಬಹುದು – ಅಂದರೆ ಡ್ರೈ ಕೂಲಿಂಗ್ ಡಿಸೈನ್ ಅಥವಾ ವೆಟ್ ಕೂಲಿಂಗ್ ಟವರ್‌ನ ಮಧ್ಯೆ ಆಯ್ಕೆಯಿದೆ. ಡ್ರೈ ಕೂಲಿಂಗ್ ಸಿಸ್ಟಮ್ (ಆಯ್ಕೆ 1) ಮತ್ತು ವೆಟ್ ಕೂಲಿಂಗ್ ಸಿಸ್ಟಮ್ (ಆಯ್ಕೆ 2)ಗಳ ಬಳಕೆಯ ಪ್ರಸ್ತಾಪಿತ ಯೋಜನೆಯ ವಿವರ ಕೆಳಗಿದೆ.

ಆಯ್ಕೆ 1

ಯೋಜನೆಗೆ ಡ್ರೈ ಕೂಲಿಂಗ್ ವ್ಯವಸ್ಥೆಯನ್ನು ಅಳವಡಿಸಿದರೆ ಕರಿಯಂಗಾಡ್ ನದಿಯಿಂದ ನೀರನ್ನು ಒದಗಿಸಬಹುದು.
ಆಯ್ಕೆ-1ರ ಕುರಿತಂತೆ ಕಚ್ಚಾ ನೀರು ಆವಶ್ಯಕತೆಗಳನ್ನು ಕೆಳಗೆ ನೀಡಲಾಗಿದೆ.

ಪಟ್ಟಿ 6

ಆಯ್ಕೆ -1ಕ್ಕೆ ಕಚ್ಚಾ ನೀರು ಆವಶ್ಯಕತೆ - 1 m^3/ದಿನವಹಿ

ಆಯ್ಕೆ 1	m^3/ಗಂಟೆಗೆ	m^3/ದಿನಕ್ಕೆ	ನೀರಿನ ಮೂಲ
ಸರ್ವಿಸ್ ನೀರು	109	2616	ಕರಿಯಂಗಾಡ್ ನದಿ. ಕೇರಳ ಜಲ ಪ್ರಾಧಿಕಾರ (ಕೆಡಬ್ಲ್ಯೂಎ)ವು ಯೋಜನೆಗೆ ನೀರು ಒದಗಿಸಲು ತಾತ್ವಿಕವಾಗಿ ಸಮ್ಮತಿಸಿದೆ.
ಸಾಗಣೆ ನೀರು	2.5	60	
ಬಿಡಬ್ಲ್ಯೂಆರ್ಒ-ಡಿಎಂ ಸ್ಥಾವರ ಆವಶ್ಯಕತೆ	26	624	
ಫಿಲ್ಟರ್‌ನಿಂದ ತ್ಯಾಜ್ಯ	7.5	180	
	145	3480	

ಆಯ್ಕೆ 2

ಸ್ಥಾವರದ ಕಂಡೆನ್ಸರ್ ಕೂಲಿಂಗ್ ವ್ಯವಸ್ಥೆಗೆ ವೆಟ್ ಕೂಲಿಂಗ್ ಟವರ್ ಬಳಸಿದಲ್ಲಿ ಸ್ಥಾವರದ ಜಾಗದಿಂದ 15 ಕಿ.ಮೀ. ದೂರವಿರುವ ಅರಬ್ಬಿ ಸಮುದ್ರದಿಂದ ನೀರು ಬಳಸಬಹುದು. ಆಯ್ಕೆ 2ರಲ್ಲಿನ ಒಟ್ಟು ನೀರಿನ ಆವಶ್ಯಕತೆಯ ಪೂರೈಕೆ ವಿವರ ಕೆಳಗಿದೆ

ಪಟ್ಟಿ 7

ಆಯ್ಕೆ - 2ರಲ್ಲಿ ಸಮುದ್ರ ನೀರಿನ ಆವಶ್ಯಕತೆ ಪೂರೈಕೆಯ ವಿವರ, m^3/ದಿನಕ್ಕೆ

ಕ್ರ.ಸಂ.	ಆಯ್ಕೆ -2		m^3/ಗಂಟೆಗೆ	m^3/ದಿನಕ್ಕೆ	ಮೂಲ
ಎ.	**ಸಮುದ್ರ ನೀರಿನ ಆವಶ್ಯಕತೆ**				ಸಮುದ್ರ ನೀರು- ಅರೇಬಿಯನ್ ಸಮುದ್ರ, ಸ್ಥಾವರದಿಂದ 15 ಕಿ.ಮೀ. ದೂರ
1.	ಕಂಡೆನ್ಸರ್ ಕೂಲಿಂಗ್ (ವೆಟ್ ಮಾದರಿ)	ಕೂಲಿಂಗ್ ಮೇಕಪ್	3650	87600	
		ಎಸ್‌ಡಬ್ಲ್ಯೂಆರ್ಒ	430	10320	
	ಮೊತ್ತ		**4080**	**97920(~ 98000)**	
ಬಿ.	**ತಾಜಾ ನೀರಿನ ಆವಶ್ಯಕತೆ**				
1.	ಬ್ರಾಕಿಶ್ ನೀರು ಆವಶ್ಯಕತೆ		26	624	
2.	ಕುಡಿಯುವ ನೀರು		3	72	
3.	ಎಚ್ಆರ್ಎಸ್‌ಜಿ ಬ್ಲೋ ಡೌನ್ ಡೈಲ್ಯೂಶನ್		60	1440	
4.	ಸರ್ವಿಸ್ ವಾಟರ್		23	552	
5.	ಎಸಿ ಮತ್ತು ವಾತಾನುಕೂಲಿತ ವ್ಯವಸ್ಥೆ		30	720	
	ಮೊತ್ತ		**142**	**3408(~ 3400)**	
	ಒಟ್ಟು ಮೊತ್ತ (ಎ+ಬಿ)		**4222**	**101328(~101400)**	

ಈ ಎರಡು ಆಯ್ಕೆಗಳಲ್ಲಿ ಡ್ರೈ ಕೂಲಿಂಗ್ ವ್ಯವಸ್ಥೆಯನ್ನು ಈ ಯೋಜನೆಗೆ ಅಳವಡಿಸಿಕೊಳ್ಳಬೇಕು.

5. ಬೇಸ್‌ಲೈನ್ ಪರಿಸರ ಸ್ಥಿತಿ ಗತಿ

ಹವಾಮಾನ

2010ರ ಮಾರ್ಚ್‌ನಿಂದ ಮೇ ತನಕದ ಹವಾಮಾನ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಚಳಿಗಾಲದಲ್ಲಿ ಗಾಳಿ ಬೀಸುವ ದಿಕ್ಕು ಪ್ರಮುಖವಾಗಿ ಪಶ್ಚಿಮದಿಂದ ಪೂರ್ವಕ್ಕೆ.

ವಾಯುಗುಣಮಟ್ಟ

ಸುತ್ತಲಿನ ಗಾಳಿಯ ಗುಣಮಟ್ಟ ಯೋಜನಾ ಸ್ಥಳದ 10 ಕಿ.ಮೀ. ವ್ಯಾಪ್ತಿಯ 12 ಪ್ರದೇಶಗಳಲ್ಲಿ ವಾಯು ಗುಣಮಟ್ಟ ಮಾಪನ (ಎಎಕ್ಯೂಎಂ)ಮಾಡಲಾಗಿದೆ. ವಿವಿಧ ದಿಕ್ಕುಗಳಿಂದ ಗಾಳಿ ಬೀಸುವ ತಾಣಗಳನ್ನು ಮಾಪನಕ್ಕೆ ಆರಿಸಲಾಗಿದೆ. ಅದರ ವಿವಿಧ ಪ್ರಮಾಣಗಳನ್ನು ಕೆಳಗೆ ನೀಡಲಾಗಿದೆ. ಸುತ್ತಲಿನ ವಾಯು ಗುಣಮಟ್ಟವು ಸಿಪಿಸಿಬಿ ಮಿತಿಯೊಳಗೇ ಇರುವುದು ಪತ್ತೆಯಾಗಿದೆ.

ಪಟ್ಟಿ 8

ಅಧ್ಯಯನ ಪ್ರದೇಶದಲ್ಲಿನ ಸುತ್ತಲಿನ ವಾಯು ಗುಣಮಟ್ಟ -$\mu g/m^3$

ಕ್ರ.ಸಂ.	ಮಾನದಂಡ		ಕನಿಷ್ಠ	ಗರಿಷ್ಠ	ಸಿಪಿಸಿಬಿ ಮಿತಿ
1	ಎಸ್‌ಪಿಎಂ		70.3	127.0	★
2	ಆರ್‌ಪಿಎಂ	ಪಿಎಂ 2.5μ	10.2	15.9	60
3		ಪಿಎಂ 10μ	40.2	55.2	100
4	SO_2		6.1	12.9	80
5	NO_x		15	20.9	80
6	O_3		20.5	35.2	100
7	ಎಚ್‌ಜಿ		ಬಿಡಿಎಲ್	ಬಿಡಿಎಲ್	★

ಗಮನಿಸಿ: ★ ಎಸ್‌ಪಿಎಂ ಮತ್ತು ಎಚ್‌ಜಿಗೆ ಪರಿಷ್ಕೃತ ಎನ್‌ಎಎಕ್ಯೂನಲ್ಲಿ ಯಾವುದೇ ಮಾನದಂಡ ನೀಡಿಲ್ಲ.

ಶಬ್ದ ಪ್ರಮಾಣ

ಪ್ರದೇಶದ 12 ತಾಣಗಳಲ್ಲಿ ಬೇಸ್‌ಲೈನ್ ಶಬ್ದ ಪ್ರಮಾಣವನ್ನು ಮಾಪನ ಮಾಡಲಾಗಿದೆ. ಹಗಲಿನಲ್ಲಿ ಶಬ್ದ ಪ್ರಮಾಣವು 50.4ರಿಂದ 53.0 ಡಿಬಿ(ಎ)ಗೆ ಸಮಾನವಾಗಿದೆ. ರಾತ್ರಿಯಲ್ಲಿ 40.7ರಿಂದ 42.5 ಡಿಬಿ(ಎ)ಗೆ ಸಮಾನಾಗಿದೆ. ಇವು ಹಗಲಿನ ಯೋಜಿತ ಮಿತಿ 45ಡಿಬಿ(ಎ) ಮತ್ತು ರಾತ್ರಿಯ ಮಿತಿ 55ಡಿಬಿ(ಎ)ಯ ಒಳಗಡೆಯೇ ಇವೆ.

ನೀರಿನ ಗುಣಮಟ್ಟ

ನೀರಿನ ಗುಣಮಟ್ಟ ಪರಿಶೀಲಿಸಲು ಯೋಜನಾ ಪ್ರದೇಶದ 12 ಸ್ಥಳಗಳಲ್ಲಿನ ಅಂತರ್ಜಲ ಮಾದರಿ ಮತ್ತು 2 ಸ್ಥಳಗಳಲ್ಲಿನ ಭೂಮೇಲ್ಮೈ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಇವುಗಳ ಫಲಿತಾಂಶವನ್ನು ಐಎಸ್ ಕುಡಿಯುವ ನೀರಿನ ಮಾನದಂಡದೊಂದಿಗೆ ತುಲನೆ ಮಾಡಲಾಗಿದ್ದು, ಗುಣಮಟ್ಟದ ಪ್ರಮಾಣವು ಅಪೇಕ್ಷಿತ ಮಿತಿಯೊಳಗಿದೆ ಎಂದು ಕಂಡುಬಂದಿದೆ.

ಪಟ್ಟಿ 9

ನೀರಿನ ಫಲಿತಾಂಶ

ಕ್ರ.ಸಂ.	ಮಾನದಂಡ	ಅಂತರ್ಜಲ	ಮೇಲ್ಮೈ ನೀರು	ಐಎಸ್:15000 ಕುಡಿಯುವ ನೀರಿನ ಪ್ರಮಾಣ	
				ಅಪೇಕ್ಷಿತ	ಪರವಾಗಿಲ್ಲ
1	pH	7.12ರಿಂದ 8.10	7.00ರಿಂದ 7.62	6.5ರಿಂದ 8.5	6.5ರಿಂದ 8.5
2	ಒಟ್ಟು ಡಿಸ್ಸಾಲ್ವ್ಡ್ ಸಾಲಿಡ್ಸ್	201ರಿಂದ 1464	212ರಿಂದ 286	500	2000
3.	ಫ್ಲುರಾಯ್ಡ್	0.64ರಿಂದ 0.85	135ರಿಂದ 191	1.0	1.5
4	ಒಟ್ಟು ಗಟ್ಟಿತನ	119ರಿಂದ 379	35ರಿಂದ 65	300	600
5	ಕ್ಲೋರೈಡ್ಸ್	18.3ರಿಂದ 758	0.38ರಿಂದ 0.78	250	1000
ಪಿಎಚ್ ಹೊರತುಪಡಿಸಿ ಎಲ್ಲಾ ಮೌಲ್ಯಗಳು ಎಂಜಿ/ಐ ಗಳಲ್ಲಿ					

ಮಣ್ಣಿನ ಗುಣಮಟ್ಟ

ಮಣ್ಣಿನ ಮಾದರಿಗಳನ್ನು ಯೋಜನಾ ಪ್ರದೇಶದ 12 ಪ್ರದೇಶಗಳಿಂದ ವಿವಿಧ ಆಳಗಳಿಂದ ಸಂಗ್ರಹಿಸಲಾಗಿದೆ. ಅವುಗಳ ಫಿಸಿಕೋ ಕೆಮಿಕಲ್ ಗುಣಗಳನ್ನು ವಿಶ್ಲೇಷಿಸಲಾಗಿದೆ. ಅವುಗಳ ಫಲಿತಾಂಶ ಕೆಳಗಿದೆ.

– ಮಣ್ಣಿನ ವಿಶ್ಲೇಷಣೆಯಿಂದ ತಿಳಿದುಬಂದುದೇನೆಂದರೆ ಇಲ್ಲಿನ ಮಣ್ಣಿನ ಮಾದರಿಯು ಕೆಂಪು ಕಳಿಮಣ್ಣು

–ಮಣ್ಣಿನ pH ಪ್ರಕಾರ ಅದು ಸಾಮಾನ್ಯದಿಂದ ಹಿಡಿದು ಲವಣಯುಕ್ತವಾಗಿದೆ (7.25–7.82)

– ಮಣ್ಣಿನಲ್ಲಿ ಲಭ್ಯವಿರುವ ನೈಟ್ರೋಜನ್ 126ರಿಂದ 226 ಕಿಗ್ರಾಂ/ಎಚ್‌ಎ. ಫಾಸ್ಪರಸ್ ಪ್ರಮಾಣವು 115.9ರಿಂದ 146.1ಕಿಗ್ರಾಂ/ಎಚ್‌ಎ. ಪೊಟ್ಯಾಸಿಯಂ 48.3ರಿಂದ 138.7 ಕಿಗ್ರಾಂ/ಎಚ್‌ಎ.

–ಆರ್ಗಾನಿಕ್ ಕಾರ್ಬನ್ 0.37ರಿಂದ 0.92 %.

ಜನಸಂಖ್ಯೆ ಮತ್ತು ಸಾಮಾಜಿಕ- ಆರ್ಥಿಕ ವಿಷಯ

ಅಧ್ಯಯನ ಪ್ರದೇಶದಲ್ಲಿನ ಎರಡು ತಾಲೂಕುಗಳಲ್ಲಿ 265485 ವಸತಿಗಳಿವೆ. 2001ರ ಜನಗಣತಿ ಪ್ರಕಾರ ಅಲ್ಲಿನ ಜನಸಂಖ್ಯೆ 1312792. ಪ್ರತೀ 1000 ಪುರುಷರಿಗೆ 1063 ಮಹಿಳೆಯರಿದ್ದಾರೆ. ಅಲ್ಲಿನ ಸಾಕ್ಷರತೆ ಪ್ರಮಾಣ 78ಶೇ. ಅಂದರೆ 1026211 ಮಂದಿ ಸಾಕ್ಷರರು. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರ ಸಂಖ್ಯೆ 90600 (6.9%) ಮತ್ತು 8469 (0.65%)

ಪ್ರದೇಶದಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ 451020 ಅಂದರೆ 34.3 % . ಹೆಚ್ಚಿನ ಕಾರ್ಮಿಕರು ಕೃಷಿಕರು, ಕೃಷಿ ಕಾರ್ಮಿಕರು, ಗುಡಿ ಕೈಗಾರಿಕೆಗಳಲ್ಲಿ ತೊಡಗಿರುವವರು, ಕಟ್ಟಡ

ನಿರ್ಮಾಣದಲ್ಲಿ ಹಾಗೂ ಇನ್ನಿತರ ಕೆಲಸ ಕಾರ್ಯಗಳಲ್ಲಿ ತೊಡಗಿರುವವರು.

ನೀರಿನ ಮುಖ್ಯ ಮೂಲಗಳೆಂದರೆ ಬಾವಿಗಳು, ಹ್ಯಾಂಡ್‌ಪಂಪ್‌ಗಳು, ಕೆರೆಗಳು ಮತ್ತು ನಳ್ಳಿ ನೀರು. ಕೆಲವು ಗ್ರಾಮಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಲಭ್ಯವಿದೆ. ಎಲ್ಲಾ ಗ್ರಾಮಗಳಲ್ಲಿ ಸಂಪರ್ಕ ವ್ಯವಸ್ಥೆ ಉತ್ತಮವಿದ್ದು ಅಂಚೆ ಕಚೇರಿ, ದೂರವಾಣಿ ಸೌಲಭ್ಯಗಳಿವೆ. ಎಲ್ಲಾ ಪ್ರಮುಖ ಗ್ರಾಮಗಳಲ್ಲಿ ಪೊಲೀಸು ಠಾಣೆಗಳಿವೆ.

6. ಪ್ರಸ್ತಾಪಿತ ಯೋಜನೆಯ ಪಾರಿಸರಿಕ ಪರಿಣಾಮ

ಪ್ರಸ್ತಾಪಿತ ಯೋಜನೆಯು ಎರಡು ವಿಧಗಳಲ್ಲಿ ಪಾರಿಸರಿಕ ಪರಿಣಾಮ ಬೀರಬಹುದು.

-ನಿರ್ಮಾಣ ಹಂತದಲ್ಲಿ

- ಕಾರ್ಯಾಚರಣಾ ಹಂತದಲ್ಲಿ

ಯೋಜನೆಯ ನಿರ್ಮಾಣ ಹಂತದಲ್ಲಿ SPM, RPM, SO_2, NO_x, ಮತ್ತು CO ಮಟ್ಟವು ನಿರ್ಮಾಣ ಚಟುವಟಿಕೆಗಳಿಂದಾಗಿ ಮತ್ತು ವಾಹನಗಳ ಸಾಗಾಟದಿಂದಾಗಿ ಏರಿಕೆಯಾಗುತ್ತದೆ. ಆದರೆ ಇವುಗಳ ಪರಿಣಾಮವು ತಾತ್ಕಾಲಿಕವಾಗಿದ್ದು ಯೋಜನಾ ಗಡಿಯೊಳಗೆ ಸೀಮಿತವಾಗಿರುತ್ತದೆ.

ನಿರ್ಮಾಣ ಹಂತದಲ್ಲಿ ಜಲ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳು ಅಲ್ಪಾವಧಿಯದ್ದು ಹಾಗೂ ನಗಣ್ಯವಾದುದು. ನಿರ್ಮಾಣ ಸಂದರ್ಭದಲ್ಲಿನ ಶಬ್ದ ಕೂಡ ನಗಣ್ಯವಾಗಿದೆ. ಅದನ್ನು ಸೀಮಿತಗೊಳಿಸಬಹುದು.ಪರಿಸರದ ಮಣ್ಣಿನ ಮೇಲೆ ಕೂಡ ಪ್ರತಿಕೂಲ ಪರಿಣಾಮವನ್ನು ನಿರಾಕರಿಸಲಾಗಿದೆ. ಅದೇರೀತಿ ನಿರ್ಮಾಣದ ವೇಳೆ ಗಿಡಮರಗಳ ಮೇಲೆ ಕೂಡ ಪ್ರತಿಕೂಲ ಪರಿಣಾಮವಾಗದು. ಒಟ್ಟಾರೆಯಾಗಿ ಯೋಜನೆಯ ನಿರ್ಮಾಣ ಹಂತದಲ್ಲಿ ಪರಿಸರದ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗಲಾರದು.

ಎ) ಕಾರ್ಯಾಚರಣಾ ಅವಧಿಯಲ್ಲಿ ಪರಿಣಾಮಗಳು

ವಾಯು ಗುಣಮಟ್ಟದ ಮೇಲೆ ಪರಿಣಾಮ

ವಿದ್ಯುತ್ ಯೋಜನೆಯಿಂದ ಉತ್ಪತ್ತಿಯಾಗುವ ಮುಖ್ಯ ವಾಯು ಮಾಲಿನ್ಯಕಾರಕ ಅಂಶವೆಂದರೆ ನೈಟ್ರೋಜನ್ ಆಕ್ಸೈಡ್. ಘಟಕದ ತ್ಯಾಜ್ಯರಾಶಿ ಮತ್ತು ಮಾಲಿನ್ಯ ಹೊರಸೂಸುವಿಕೆಯ ವಿವರಗಳು ಹೀಗಿವೆ.

ಪಟ್ಟಿ 10

ತ್ಯಾಜ್ಯ ರಾಶಿ ಮತ್ತು ಮಾಲಿನ್ಯ ಹೊರಸೂಸುವ ವಿವರ

ವಿವರ	3 X 400ಸಿಸಿಪಿಪಿ			
	ಘಟಕಗಳು	ಸಿಸಿಪಿಪಿ1	ಸಿಸಿಪಿಪಿ2	ಸಿಸಿಪಿಪಿ3
ಸ್ಥಾವರ ಸಾಮರ್ಥ್ಯ	ಮೆವಾ	400	400	400
ಇಂಧನ ಮಾದರಿ	–	ನೈಸರ್ಗಿಕ ಅನಿಲ	ನೈಸರ್ಗಿಕ ಅನಿಲ	ನೈಸರ್ಗಿಕ ಅನಿಲ
ಇಂಧನ ಬಳಕೆ	ಎಂಎಸ್‌ಸಿಎಂಡಿ	1.75	1.75	1.75
ತ್ಯಾಜ್ಯರಾಶಿಯ ಎತ್ತರ	(m)	70	70	70
ರಾಶಿಯ ವ್ಯಾಪ್ತಿ	(m)	7	7	7
ಫ್ಲ್ಯೂ ಗ್ಯಾಸ್ ಉಷ್ಣತೆ	(^oC)	107	107	107
ಫ್ಲ್ಯೂ ಗ್ಯಾಸ್‌ನ ವೇಗ	m/s	25	25	25
ಹರಿವು	NM^3/s	760	760	760
$N0_x$ ತ್ಯಾಜ್ಯ	g/s	38	38	38
ಎಮರ್ಜೆನ್ಸಿ ವಿದ್ಯುತ್ ಪೂರೈಕೆ- ಡಿಜಿ ಸೆಟ್ಸ್	5X 1000 ಕೆವಿಎ (ಸಿಸಿಪಿಪಿ 1 ಮತ್ತು 2ಕ್ಕೆ ಒಂದು ಬದಲಿ ವ್ಯವಸ್ಥೆ, ಸಿಸಿಪಿಪಿ3ಗೆ ಒಂದು ಬದಲಿ ವ್ಯವಸ್ಥೆ)			
ತ್ಯಾಜ್ಯ ರಾಶಿ ಫಾರ್ಮುಲಾ	ಕಟ್ಟಡದ ಎತ್ತರ + 0.2√ 2ಗಾಗಿ 800 ಕೆವಿಎಗಿಂತ ಹೆಚ್ಚಿನ ಡಿಜಿ ಸೆಟ್‌ಗಳಿಗೆ ಎಂಒಇಎಫ್ ಮಾರ್ಗದರ್ಶನದ ಪ್ರಕಾರ ತ್ಯಾಜ್ಯರಾಶಿಯ ಕನಿಷ್ಠ ಎತ್ತರ 30 ಮೀ.			
ಇಂಧನ (ಡೀಸಿಲ್)	1000 ಕೆವಿಎಗೆ 100ಲೀ. /ಗಂಟೆಗೆ			
ಸಲ್ಫರ್ ಅಂಶ	0.5% ಗರಿಷ್ಠ			
$N0_x$	5.1 g/kg			
ಸಾಂದ್ರತೆ	0.860			

ಸ್ಥಳ	ಮೂಲ	ಎತ್ತರ(ಮೀ)	ವ್ಯಾಪ್ತಿ (ಮೀ)	ಉಷ್ಣತೆ (ಡಿಗ್ರಿ ಸೆಂ.)	ಗ್ಯಾಸ್ ವೆಲೋಸಿಟಿ (ಎಂ/ಸೆ)	So_2 (gm/sec)	No_x (gm/sec)
ಸಿಸಿಪಿಪಿ1	1000ಕೆವಿಎ	30	0.5	85	18	0.24	0.12
ಸಿಸಿಪಿಪಿ2	1000ಕೆವಿಎ	30	0.5	85	18	0.24	0.12
ಸಿಸಿಪಿಪಿ3	1000ಕೆವಿಎ	30	0.5	85	18	0.24	0.12
ಸೂಚನೆ : ವಿದ್ಯುತ್ ಸ್ಥಾವರ ಕಾರ್ಯಾಚರಣೆ ಸಂದರ್ಭದಲ್ಲಿ ಮಾತ್ರ ಇಂತಹ ಕೆಟ್ಟ ಪರಿಸ್ಥಿತಿ ಉಂಟಾಗುವುದನ್ನು ಪರಿಗಣಿಸಿ ಡಿಜಿ ಸೆಟ್‌ಗಳನ್ನೇ ರೂಪಿಸುವ ಬಗ್ಗೆ ಗಮನಹರಿಸಲಾಗಿಲ್ಲ.							

ಮೇಲಿನ ತ್ಯಾಜ್ಯ ಮಾಹಿತಿ ಮತ್ತು ಹವಾಮಾನ ಮಾಹಿತಿಯನ್ನು ಆಧರಿಸಿ No_x ನ ಕಾನ್‌ಸನ್‌ಟ್ರೇಷನ್ ಅನ್ನು ಅಂದಾಜಿಸಬಹುದು. ಜಿಎಲ್‌ಸಿಎಸ್ , ಯುಎಸ್‌ಇಪಿಎ ಅಂದಾಜಿನ ಕುರಿತಂತೆ ಐಎಸ್‌ಸಿಎಸ್‌ಟಿ3 ಮಾದರಿಯನ್ನು ಅನುಸರಿಸಬಹುದು. ಆ ಮೂಲಕ ಯೋಜನಾನಂತರದ ಪರಿಸ್ಥಿತಿಯನ್ನು ಈ ಕೆಳಗಿನಂತೆ ಅಂದಾಜಿಸಬಹುದು. ಭೂಮಟ್ಟದ ತ್ಯಾಜ್ಯವನ್ನು ಬೇಸ್‌ಲೈನ್ ಮಟ್ಟದಲ್ಲಿ ಸುಪರ್‌ಇಂಪೋಸ್ ಮಾಡಬಹುದು. ಯೋಜನಾನಂತರದ ಮಾಲಿನ್ಯವು ಸಿಪಿಸಿಬಿ ಮಿತಿಯಲ್ಲೇ ಇರುತ್ತದೆ.

ಪಟ್ಟಿ 11

ಯೋಜನಾನಂತರದ ಪರಿಸ್ಥಿತಿ – ಘಟಕಗಳು $\mu g/m^3$

ಕ್ರ.ಸಂ.	ವಿಷಯ	ನೈಟ್ರೋಜನ್‌ನ ಆಕ್ಸೈಡ್‌ಗಳು(No_x)
1	ಬೇಸ್‌ಲೈನ್ ಚಿತ್ರಣ (ಗರಿಷ್ಠ)	20.9
2	ಅಂದಾಜಿಸಿದ ಜಿಎಲ್‌ಸಿ (ಗರಿಷ್ಠ)	7.52
3	ಗರಿಷ್ಠ ಸಾಂದ್ರತೆ ಉಂಟಾಗುವ ಅಂತರ	1 ಕಿ.ಮೀ.
4	ದಿಕ್ಕು	ಪೂರ್ವ
5	ಭವಿಷ್ಯದ ಅಂದಾಜು ಮೌಲ್ಯ –ಒಟ್ಟಾರೆ ದೃಶ್ಯ (ಕೆಟ್ಟಸ್ಥಿತಿ)	28.45
6	ಎಂಒಇಎಫ್/ಸಿಪಿಸಿಬಿ ಸ್ಟಾಂಡರ್ಡ್	80

ಬಿ) ಜಲ ಪರಿಸರದ ಮೇಲೆ ಪರಿಣಾಮ

ನೀರಿನ ಮೇಲಾಗುವ ಪರಿಣಾಮವನ್ನು ಆಯ್ಕೆ ಮಾಡುವ ನೀರಿನ ಮೂಲದ ಆಧಾರದಲ್ಲಿ ಅಂದರೆ, ಆಯ್ಕೆ 1 (ಕರಿಯಂಗಾಡ್ ನದೀ ನೀರು) ಮತ್ತು ಆಯ್ಕೆ 2 (ಅರೇಬಿಯನ್‌ಸಮುದ್ರದ ನೀರು)ಆಧರಿಸಿ ವಿವರಿಸಲಾಗಿದೆ.ಆದರೂ ಎರಡೂ ಸ್ಥಿತಿಗಳಲ್ಲಿ ಜಲ ಪರಿಸರದ ಮೇಲಾಗುವ ಪರಿಣಾಮವನ್ನು ಕೆಳಗೆ ನೀಡಲಾಗಿದೆ.

(ಆಯ್ಕೆ 1)

ಯೋಜನಾ ಪ್ರದೇಶದೊಳಗೆ ಜಲ ಸಂಗ್ರಹಾಗಾರ ನಿರ್ಮಿಸಿ ಅದಕ್ಕೆ ಕರಿಯಂಗಾಡ್ ನದಿಯ ನೀರನ್ನು ಪಂಪ್ ಮಾಡಬಹುದು. ಅಗತ್ಯವಿರುವ ಪ್ರಮಾಣದ ನೀರು ಪಡೆಯಲು ಅಣೆಕಟ್ಟು ಕಟ್ಟಬೇಕಾಗಬಹುದು.

ಆಯ್ಕೆ 1ರಲ್ಲಿ ಡ್ರೈ ಕಂಡೆನ್ಸರ್ ಕೂಲಿಂಗ್ ವ್ಯವಸ್ಥೆಯಲ್ಲಿ ಯಾವುದೇ ತ್ಯಾಜ್ಯ ಉತ್ಪತ್ತಿಯಾಗುವುದಿಲ್ಲ. ಆದರೆ ಆಯ್ಕೆ 1ರಲ್ಲಿನ ಪ್ರಮುಖ ತ್ಯಾಜ್ಯವೆಂದರೆ ಸರ್ವಿಸ್ ವಾಟರ್‌ನಿಂದ , ಬಿಡಬ್ಲ್ಯುಆರ್‌ಓ–ಡಿಎಂ ಪ್ಲಾಂಟ್ ಮತ್ತು ಕ್ಲಾರಿಫೈಡ್ ಅಂಡ್ ಫಿಲ್ಟರ್ ವಾಶ್‌ನಿಂದ. ಪ್ರಸ್ತಾಪಿತ ಯೋಜನೆಗೆ ಎಫ್ಲುಯೆಂಟ್ ಆನ್ ಜೀರೋ ಡಿಸ್ಚಾರ್ಜ್ ಕಾನ್ಸೆಪ್ಟ್ ಅಳವಡಿಸಬಹುದು. ದ್ರವ ರೂಪದ ತ್ಯಾಜ್ಯಗಳನ್ನು ಸ್ಥಾವರದಲ್ಲೇ ಸಂಸ್ಕರಿಸಿ ಮರುಬಳಕೆ ಮಾಡಬಹುದು. ಕೊಳಚೆ ಸಂಸ್ಕರಣಾ ಗುಂಡಿ ರಚಿಸಬಹುದು. ಅದರಿಂದ ಸಂಸ್ಕರಿಸಿದ ನೀರನ್ನು ತೋಟಗಾರಿಕೆಗೆ, ಗಿಡಗಳಿಗೆ , ಸ್ಥಾವರ ತೊಳೆಯಲು ಬಳಸಬಹುದು. ಈ ನೀರಿನಿಂದ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗದು. ವೇಸ್ಟ್ ವಾಟರ್ ಜನರೇಶನ್‌ನ ವಿವರ ಕೆಳಗೆ ನೀಡಲಾಗಿದೆ.

ಪಟ್ಟಿ 12

ವೇಸ್ಟ್ ವಾಟರ್ ಜನರೇಶನ್ -m^3/ದಿನವಹಿ(ಆಯ್ಕೆ 1)

ವಿವರ	ವೇಸ್ಟ್‌ವಾಟರ್ ಜನರೇಶನ್	ಪ್ರತಿಕ್ರಿಯೆ
ಎಚ್‌ಆರ್‌ಎಸ್‌ಜಿ ಬ್ಲೋ ಡೌನ್	240	ಕೊಳಚೆಗುಂಡಿ/ಈಟಿಪಿ
ಬಿಡಬ್ಲ್ಯುಆರ್‌ಓ ಪ್ಲಾಂಟ್	94	ಕೊಳಚೆಗುಂಡಿ/ಈಟಿಪಿ
ಡಿಎಂ ವಾಟರ್ ರಿಜೆಕ್ಟ್	26	ಕೊಳಚೆಗುಂಡಿ/ಈಟಿಪಿ
ಪ್ಲಾಂಟ್ ಕೊಳಚೆ ನೀರು	80	ಆಯಿಲ್ ಮತ್ತು ಗ್ರೀಸ್ ಟ್ರ್ಯಾ/ಕೊಳಚೆಗುಂಡಿ/ಈಟಿಪಿ
ಮೊತ್ತ	**440**	**ಇಟಿಪಿ ಸಂಸ್ಕರಿತ ನೀರನ್ನು ಗಾರ್ಡನಿಂಗ್‌ಗೆ ಬಳಸಬಹುದು.**
ಡೊಮೆಸ್ಟಿಕ್ ವೇಸ್ಟ್ ವಾಟರ್	50	**ಎಸ್‌ಟಿಪಿ ಸಂಸ್ಕರಿತ ನೀರನ್ನು ಗಾರ್ಡನಿಂಗ್‌ಗೆ ಬಳಸಬಹುದು.**
ಒಟ್ಟು ಮೊತ್ತ	**490**	

ಆಯ್ಕೆ 2

ಸಮುದ್ರದ ನೀರನ್ನು ಅರೇಬಿಯನ್ ಸಮುದ್ರದಿಂದ ಪಡೆಯಬಹುದು. ಸಿಹಿ ನೀರು ಬೇಕಾದರೆ ಸಮುದ್ರದ ನೀರಿನ ಉಪ್ಪಿನಾಂಶ ತೆಗೆಯಲು ಆರ್‌ಓ ಪ್ರಕ್ರಿಯೆ ಆರಂಭಿಸಬಹುದು. ಸ್ಥಾವರದಲ್ಲಿ ಬಳಸುವ ಮುನ್ನ ಸಮುದ್ರ ನೀರನ್ನು ಸಂಸ್ಕರಿಸಬೇಕು. ವಿವಿಧ ಚಟುವಟಿಕೆಗಳಿಂದ ವೇಸ್ಟ್‌ವಾಟರ್ ಜನರೇಶನ್‌ನ ವಿವರಗಳು ಇಲ್ಲಿವೆ.

ಪಟ್ಟಿ 13

ವೇಸ್ಟ್ ವಾಟರ್ ಜನರೇಶನ್ -ಎಂ^{3}/ದಿನವಹಿ(ಆಯ್ಕೆ 2)

ವಿವರ	ವೇಸ್ಟ್‌ವಾಟರ್ ಜನರೇಶನ್	ಪ್ರತಿಕ್ರಿಯೆ
ಕೂಲಿಂಗ್ ಟವರ್ ಬ್ಲೋ ಡೌನ್	57888	ಔಟ್‌ಫಾಲ್ ಸಂಪ್‌ಗೆ/ಸಮುದ್ರಕ್ಕೆ
ಎಸ್‌ಡಬ್ಲ್ಯುಆರ್‌ಓ ತಿರಸ್ಕೃತ	6324	ಔಟ್‌ಫಾಲ್ ಸಂಪ್‌ಗೆ/ಸಮುದ್ರಕ್ಕೆ
ಮೊತ್ತ	**64212**	**ಸಮುದ್ರಕ್ಕೆ ಬಿಡುವುದು**
ಎಚ್‌ಆರ್‌ಎಸ್‌ಜಿ ಬ್ಲೋ ಡೌನ್	240	ಕೊಳಚೆ ಗುಂಡಿ/ಇಟಿಪಿ
ಡಿಎಂ ವಾಟರ್ ರಿಜೆಕ್ಟ್	26	ಕೊಳಚೆ ಗುಂಡಿ/ಇಟಿಪಿ
ಪ್ಲಾಂಟ್ ಡ್ರೈನ್ ವಾಟರ್	80	ಆಯಿಲ್ ಮತ್ತು ಗ್ರೀಸ್ ಟ್ರ್ಯಾಪ್/ಕೊಳಚೆ ಗುಂಡಿ/ಇಟಿಪಿ
ಮೊತ್ತ	**346**	**ಇಟಿಪಿ ಸಂಸ್ಕರಿತ ನೀರನ್ನು ಗಾರ್ಡನಿಂಗ್‌ಗೆ ಬಳಸುವುದು**
ಆಂತರಿಕ ತ್ಯಾಜ್ಯನೀರು	50	ಎಸ್‌ಟಿಪಿ ಸಂಸ್ಕರಿತ ನೀರನ್ನು ಗಾರ್ಡನಿಂಗ್‌ಗೆ ಬಳಸುವುದು
ಒಟ್ಟು ಮೊತ್ತ	**64608**	

ಆಯ್ಕೆ 2ರಲ್ಲಿ ವೆಟ್ ಕಂಡೆನ್ಸರ್ ಕೂಲಿಂಗ್ ಸಿಸ್ಟಮ್‌ನ ಮುಖ್ಯ ತ್ಯಾಜ್ಯವೆಂದರೆ ಕೂಲಿಂಗ್ ಟವರ್ ಬ್ಲೋ ಡೌನ್ ಹಾಗೂ ಎಸ್‌ಡಬ್ಲ್ಯುಆರ್‌ಓ ತ್ಯಾಜ್ಯ. ವಾಟರ್ ಟ್ರೀಟ್‌ಮೆಂಟ್ ಸ್ಥಾವರ(ಡಿಎಂ ಪ್ಲಾಂಟ್)ದಲ್ಲಿ ಕೇಶನ್ ರೆಸಿನ್ ಘಟಕದ ರಿಜನರೇಶನ್‌ನಿಂದ ಉಂಟಾಗುವ ತ್ಯಾಜ್ಯವು ಮುಖ್ಯವಾಗಿ ಆಮ್ಲೀಯ ಗುಣವುಳ್ಳದ್ದು. ಆನಿಯನ್ ರೆಸಿನ್ ಘಟಕದ ತ್ಯಾಜ್ಯವು ಅಲ್ಕಾಲೈನ್ ಗುಣವುಳ್ಳದ್ದು. ಡಿಎಂ ಸ್ಥಾವರದ ಒಟ್ಟು ತ್ಯಾಜ್ಯ ನೀರನ್ನು ಹಾನಿರಹಿತಗೊಳಿಸಿ ಕೊಳಚೆ ಗುಂಡಿಗೆ ಸಾಗಿಸಬಹುದು.

ಸಿಡಬ್ಲ್ಯು ಬ್ಲೋಡೌನ್ ಅನ್ನು ಸಮುದ್ರಕ್ಕೆ ಬಿಡುವ ಕುರಿತಾಗಿ ಯೋಜಿಸಬಹುದು. ಅದನ್ನು ಉಪ್ಪು ತಯಾರಿಕಾ ಸ್ಥಾವರಕ್ಕೆ ಸಾಗಿಸಬಹುದು. ಇತರ ದ್ರವೀಕೃತ ತ್ಯಾಜ್ಯಗಳನ್ನು ಸ್ಥಾವರದಲ್ಲಿ ಮರುಬಳಸಬಹುದು. ಕೊಳಚೆಗುಂಡಿಯಿಂದ ಸಂಸ್ಕರಿಸಿದ ನೀರನ್ನು ಗಾರ್ಡನಿಂಗ್, ಗಿಡಗಳಿಗೆ ಬಳಸಬಹುದು.

ತ್ಯಾಜ್ಯ ನೀರು ಗುಣಲಕ್ಷಣ, ಕೊಳಚೆ ಗುಂಡಿಯ ಮತ್ತು ಎಸ್‌ಟಿಪಿಯ ಸಂಸ್ಕರಿತ ತ್ಯಾಜ್ಯ ನೀರು ಗುಣಲಕ್ಷಣ ಹಾಗೂ ದ್ರವೀಕೃತ ತ್ಯಾಜ್ಯದ ಗುಣಮಟ್ಟಗಳ ವಿವರ ಕೆಳಗೆ ಪಟ್ಟಿಯಲ್ಲಿ ನೀಡಲಾಗಿದೆ.

ಪಟ್ಟಿ 14

ತ್ಯಾಜ್ಯ ನೀರಿನ ಗುಣಲಕ್ಷಣಗಳು

ಮಾನದಂಡ	ಘಟಕಗಳು	ಸಿಟಿ ಬ್ಲೋಡೌನ್	ಎಸ್‌ಡಬ್ಲ್ಯು ಆರ್‌ಓ ರಿಜೆಕ್ಟ್	ಬಿಡಬ್ಲ್ಯು ಆರ್‌ಓ ರಿಜೆಕ್ಟ್	ಪ್ಲಾಂಟ್ ಡ್ರೈನ್	ನ್ಯೂಟ್ರಲ್ ಐಜಿಂಗ್ ಪಿಟ್	ಎಚ್‌ಆರ್‌ಎಸ್‌ಜಿ ಬ್ಲೋ ಡೌನ್	ಡೋಮ್ ಅಂಡ್ ಸಾನ್
pH	–	6.5–8.0	6.5–8.0	6.5–8.0	6.5–8.0	3.0–10.0	6.5–8.0	6.5–8.0
ಆಯಿಲ್ ಮತ್ತು ಗ್ರೀಸ್	MG/l	<1.0	<1.0	<1.0	10	<5	<1.0	15
ಟಿಎಸ್‌ಎಸ್	MG/l	200	50	50	250	100	50	150–200
ಟಿಡಿಎಸ್	MG/l	37000	40100	3500	750	250	500	400–450
ಸಿಓಡಿ	MG/l	–	<25	<25	<5	<5	<5	300–400
ಬಿಓಡಿ	MG/l	–	<2	<2	<1	<2	<2	200–275

ಪಟ್ಟಿ 15

ಫೈನಲ್ ಟ್ರೀಟೆಡ್ ಗುಣಲಕ್ಷಣಗಳು (ಕೊಳಚೆಗುಂಡಿ ಮತ್ತು ಎಸ್‌ಟಿಪಿ)

ಕ್ರ.ಸಂ.	ಮಾನದಂಡ	ಮೌಲ್ಯ
1	pH	6.5–8.5
2	ಆಯಿಲ್ ಮತ್ತು ಗ್ರೀಸ್ (Mg/l)	<10
3	ಟಿಎಸ್ಎಸ್ (ಎಂಜಿ/ಐ)	<100
4	ಟಿಡಿಎಸ್ (ಎಂಜಿ/ಐ)	<2100
5	ಉಷ್ಣತೆ , ಡಿಗ್ರಿ ಸೆಂಟಿಗ್ರೇಡ್	ಪಡೆಯುವ ನೀರಿನ ಉಷ್ಣತೆಯ 5 ^{o}C ಮೀರಬಾರದು.
6	ಮುಕ್ತವಾಗಿ ಲಭ್ಯ ಕ್ಲೋರಿನ್	<0.5
7	ಫಾಸ್ಫೇಟ್ಸ್	<5.0

ಪಟ್ಟಿ 16

ಡಿಸ್ಚಾರ್ಜ್ ಸ್ಟಾಂಡರ್ಡ್ಸ್

ಮೂಲ ಮಾನದಂಡ	ಘಟಕಗಳು	ಸಿಸಿಪಿಪಿ
ಪಿಎಚ್		6.5ರಿಂದ 8.5
ಉಷ್ಣತೆ	ಡಿಗ್ರಿ ಸೆಂಟಿಗ್ರೇಡ್	ಪಡಕೊಂಡುದಕ್ಕಿಂತ 5°Cಗಿಂತ ಹೆಚ್ಚಿರಬಾರದು.
ಸಸ್ಪೆಂಡೆಡ್ ಸಾಲಿಡ್ಸ್	ಎಂಜಿ/ಐ	100
ಆಯಿಲ್ ಮತ್ತು ಗ್ರೀಸ್	ಎಂಜಿ/ಐ	20
ತಾಮ್ರ (ಒಟ್ಟು)	ಎಂಜಿ/ಐ	1.0
ಕಬ್ಬಿಣ (ಒಟ್ಟು)	ಎಂಜಿ/ಐ	1.0
ಉಚಿತ ಲಭ್ಯ ಕ್ಲೋರಿನ್	ಎಂಜಿ/ಐ	0.5
ಜಿಂಕ್	ಎಂಜಿ/ಐ	1.0
ಕ್ರೋಮಿಯಂ (ಒಟ್ಟು)	ಎಂಜಿ/ಐ	0.2
ಫಾಸ್ಫೇಟ್ಸ್	ಎಂಜಿ/ಐ	5.0
ಇತರ ಕೊರೋಸನ್ ಇನ್‌ಹಿಬಿಟಿಂಗ್ ವಸ್ತುಗಳು	–	
ಮೂಲ : ಇಪಿಎ ಅಧಿಸೂಚನೆ S.O 844(E), ದಿನಾಂಕ 19 ನವೆಂಬರ್ 1996 ಮತ್ತು ಜಿಎಸ್ಆರ್ 7, ಡಿಸೆಂಬರ್ 22, 1998		

ಸಿ) ಮಣ್ಣಿನ ಫಲವತ್ತತೆಯ ಮೇಲಿನ ಪರಿಣಾಮ

ವಿದ್ಯುತ್ ಸ್ಥಾವರದ ತ್ಯಾಜ್ಯಗಳನ್ನು ಸಾಮಾನ್ಯ ಕೊಳಚೆಗುಂಡಿಯಲ್ಲಿಸಂಗ್ರಹಿಸಿ ಅದನ್ನು ಸಂಸ್ಕರಿಸಿದ ಬಳಿಕ ತೋಟಗಾರಿಕೆಗೆ ಮತ್ತು ತೊಳೆಯಲು ಬಳಸಬಹುದಾಗಿದೆ. ತ್ಯಾಜ್ಯಗಳ ಕುರಿತಂತೆ ಶೂನ್ಯ ವಿತರಣೆ ಸಿದ್ಧಾಂತ ಪಾಲಿಸುವುದರಿಂದ ಪ್ರಸ್ತಾಪಿತ ಯೋಜನೆಯಿಂದ ಮಣ್ಣಿನ ಫಲವತ್ತತೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲ. ಆಂತರಿಕ ಬಳಕೆ ಮತ್ತು ಪ್ಲಾಂಟ್ ಸರ್ವಿಸಸ್‌ನ ನೀರನ್ನು ಸಂಸ್ಕರಿಸಿ ಸ್ಥಾವರ ಪ್ರದೇಶದೊಳಗೆ ಹಸಿರು ಬೆಳೆಸಲು, ಅಗ್ನಿ ಶಾಮಕ ಉದ್ದೇಶಗಳಿಗೆ ಬಳಸಬಹುದು.

ಡಿ) ಭೌಗೋಳಿಕ ಪರಿಸರದ ಮೇಲೆ ಪರಿಣಾಮ

ಪ್ರಸ್ತಾಪಿತ ವಿದ್ಯುತ್ ಯೋಜನೆಯು ಗ್ಯಾಸ್ ಆಧಾರಿತ ಕಂಬೈನ್‌ಡ್ ಸೈಕಲ್ ಪವರ್ ಪ್ಲಾಂಟ್ ಆಗಿರುವುದರಿಂದ ಪರಿಸರದ ಭೌಗೋಳಿಕ ಗಿಡಮರ , ವನ್ಯಮೃಗ ಸಂಪತ್ತಿನ ಮೇಲೆ ದುಷ್ಪರಿಣಾಮ ಬೀರುವುದಿಲ್ಲ. ಅದೂ ಅಲ್ಲದೆ ಯೋಜನಾ ಪ್ರದೇಶದಲ್ಲಿ ವಿನಾಶದ ಅಂಚಿಗೆ ಸರಿದಿರುವ ಯಾವುದೇ ವನ್ಯ ಸಂಪತ್ತಾಗಲಿ, ಪ್ರಾಣಿ ಸಂಕುಲಗಳಾಗಲಿ ಇಲ್ಲ. ಯೋಜನೆಯು ಇಂತಹ ಸಂಪತ್ತಿನ ಅಸ್ತಿತ್ವಕ್ಕೆ ಯಾವುದೇ ರೀತಿಯಲ್ಲಿ ನೇರ ಪರಿಣಾಮ ಬೀರುವುದಿಲ್ಲ.

ಇ) ಜನಸಂಖ್ಯೆ ಮತ್ತು ಸಾಮಾಜಿಕ-ಆರ್ಥಿಕ

ಪ್ರಸ್ತಾಪಿತ ಯೋಜನೆಯ ನಿರ್ಮಾಣ ಸಮಯದಲ್ಲಿ ಜನಸಂಖ್ಯೆ ಮತ್ತು ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾಗುವ ಪರಿಣಾಮಗಳು ಒಳ್ಳೆಯವೂ ಆಗಿವೆ , ಪ್ರತಿಕೂಲಕರವೂ ಆಗಿವೆ. ಅವುಗಳ ಕೆಲವು ವಿವರಗಳು ಹೀಗಿವೆ.

–ಉದ್ಯೋಗಾವಕಾಶದಲ್ಲಿ ಏರಿಕೆಯಾಗಲಿದೆ ಮತ್ತು ಉದ್ಯೋಗಕ್ಕಾಗಿ ಹೊರ ಪ್ರದೇಶಕ್ಕೆ ವಲಸೆ ಹೋಗುವುದು ತಪ್ಪುತ್ತದೆ

–ಸೇವಾ ವಲಯದಲ್ಲಿ ಪ್ರಗತಿಯಾಗಲಿದೆ.
–ಸ್ಥಳೀಯ ಉತ್ಪನ್ನಗಳ ಗ್ರಾಹಕ ಬೆಲೆಯಲ್ಲಿ ಮತ್ತು ಸೇವೆಗಳ ಬೆಲೆಯಲ್ಲಿ ಏರಿಕೆಯಾಗಲಿದೆ. ಜಾಗದ ಬೆಲೆ, ಮನೆ ಬಾಡಿಗೆ, ಕಾರ್ಮಿಕ ವೇತನದಲ್ಲಿ ಏರಿಕೆಯಾಗಲಿದೆ.
–ಅಧ್ಯಯನ ಪ್ರದೇಶದ ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲಿ ಸುಧಾರಣೆಯಾಗಲಿದೆ.
–ಸಾರಿಗೆ ವ್ಯವಸ್ಥೆ, ಸಂಪರ್ಕ, ಆರೋಗ್ಯ ಮತ್ತು ಶಿಕ್ಷಣ ಸೇವೆಯಲ್ಲಿ ಸುಧಾರಣೆಯಾಗಲಿದೆ.
–ಹೆಚ್ಚಿನ ಉದ್ಯಮ, ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಸೇವಾ ಕ್ಷೇತ್ರದಿಂದಾಗಿ ಉದ್ಯೋಗ ಹೆಚ್ಚಲಿದೆ.
ಒಟ್ಟಾರೆಯಾಗಿ ಸಾಮಾಜಿ ಆರ್ಥಿಕ ಪರಿಸ್ಥಿತಿಯ ಮೇಲಿನ ಪರಿಣಾಮವು ಲಾಭಕರವೇ ಆಗಲಿದೆ.

7. ಪರಿಸರ ನಿರ್ವಹಣಾ ಯೋಜನೆ

ಎ. ವಾಯು ಗುಣಮಟ್ಟ ನಿಯಂತ್ರಣ ಕ್ರಮಗಳು

ನಿರ್ಮಾಣ ಹಂತದಲ್ಲಿ ಉಂಟಾಗುವ ಗಾಳಿ ಪರಿಸರದ ಮೇಲಿನ ಪರಿಣಾಮಗಳು ನಿರ್ಮಾಣ ಕಾಮಗಾರಿಗಳು ಮುಕ್ತಾಯಗೊಳ್ಳುತ್ತಿರುವಂತೆಯೆ ಕಡಿಮೆಯಾಗುತ್ತ ಬರುತ್ತವೆ.

ವಿದ್ಯುತ್ ಯೋಜನೆಯ ಕಾರ್ಯಾಚರಣಾ ಹಂತದಲ್ಲಿ ಉತ್ಪತ್ತಿಯಾಗುವ ಫ್ಲ್ಯೂ ಗ್ಯಾಸ್‌ನಿಂದ ಉಂಟಾಗುವ ನೈಟ್ರೋಜನ್ ಆಕ್ಸೈಡ್ ವಾಯು ಮಾಲಿನ್ಯ ಉಂಟು ಮಾಡುವ ಪ್ರಮುಖ ಅಂಶವಾಗಿದೆ.

ಈ ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಕೆಳಗಿನ ಕ್ರಮಗಳನ್ನು ಅನುಸರಿಸಬಹುದು.
–NO_x ಸೂಸುವಿಕೆಯನ್ನು ತಡೆಯಲು ಲೋ NO_x ಬರ್ನರ್‌ಗಳಿರುವ ಸ್ಟೀಮ್ ಜನರೇಟರ್‌ಗಳನ್ನು ಬಳಸಬಹುದು.
–ಸ್ಟೀಮ್ ಜನರೇಟರ್‌ಗಳಲ್ಲಿ ಉತ್ಪತ್ತಿಯಾಗುವ NO_x ವನ್ನು ವಿಶ್ವಬ್ಯಾಂಕಿನ ನಿಯಮದಂತೆ 50mg/Nm3 ಗೆ ನಿಯಂತ್ರಿಸಬಹುದು.
– ಭಾರತೀಯ ತ್ಯಾಜ್ಯ ನಿಯಂತ್ರಣ ನಿಯಮದಂತೆ NO_x ಸೂಸುವಿಕೆಯನ್ನು ಭೂಮಟ್ಟ ಕಾನ್‌ಸನ್‌ಟ್ರೇಶನ್‌ಗೆ ನಿಯಂತ್ರಿಸಬಹುದು.
– ವಾಹನಗಳ ಮಾಲಿನ್ಯವನ್ನು ಕಡಿಮೆ ಮಾಡಲು ಒಳರಸ್ತೆಗಳನ್ನು ಕಾಂಕ್ರೀಟೀಕರಣ ಅಥವಾ ಡಾಮರೀಕರಣ ಮಾಡಬಹುದು.

ಮಾಲಿನ್ಯ ನಿಯಂತ್ರಣ ಮತ್ತು ನಿಗಾ ವ್ಯವಸ್ಥೆ

ಈ ಯೋಜನೆಗೆ ಪ್ರಸ್ತಾಪಿಸಿರುವ ಮಾಲಿನ್ಯ ನಿಯಂತ್ರಣ ಮತ್ತು ನಿಗಾ ವ್ಯವಸ್ಥೆ ಹೀಗಿದೆ:

1.)ಫ್ಲ್ಯೂ ಗ್ಯಾಸ್ O_2 ಮತ್ತು CO ನಿಯಂತ್ರಣ

ಇವನ್ನು ಎಕನಾಮೈಸರ್ ಔಟ್‌ಲೆಟ್ ನಲ್ಲಿ ಅಳತೆ ಮಾಡಬಹುದು. ಜತೆಗೇ O_2 ಏರ್ ಪ್ರೀ ಹೀಟರ್ ಔಟ್‌ಲೆಟ್‌ನಲ್ಲಿ ಕೂಡ ನಿಯಂತ್ರಿಸಬಹುದು. ಇದಕ್ಕಾಗಿ ಸಿಒ ಮತ್ತು ಒ$_2$ ಮಾನಿಟರ್ ಪ್ರೋಬ್ಸ್ ಮತ್ತು ಅನಲೈಸರ್‌ಗಳನ್ನು ಪ್ರತ್ಯೇಕವಾಗಿ ಅಳವಡಿಸಿಕೊಳ್ಳಬಹುದು.

2.) ತ್ಯಾಜ್ಯ ರಾಶಿ ನಿಗಾ ವಹಿಸುವಿಕೆ

ತ್ಯಾಜ್ಯ ರಾಶಿಯಿಂದ SO_2, CO_2 ಮತ್ತು NO_x ಗಳ ಸ್ಯಾಂಪಲ್ ಪಡೆದುಕೊಂಡು ಅವುಗಳ ಸ್ಟಾಕ್ ಗ್ಯಾಸ್ ಅನಾಲಿಸಿಸ್ ಮಾಡಿಸಬಹುದು. ಅವುಗಳ ಸ್ಯಾಂಪಲ್‌ಗಳನ್ನು ಅನಾಲೈಸರ್‌ಗಳಿಗೆ ಕೊಡಬಹುದು. ಪ್ರತಿ ಯೂನಿಟ್‌ಗೆ ಒಂದು ಸ್ಯಾಂಪ್ಲಿಂಗ್ ವ್ಯವಸ್ಥೆಯನ್ನು ಪೂರೈಸಬಹುದು.

ಹತ್ತಿರದ ಗ್ರಾಮಗಳಲ್ಲಿನ ವಾಯು ಮಾಲಿನ್ಯದ ಮೇಲೆ ನಿಗಾ ಇಡಲು ಏರ್ ಮಾನಿಟರಿಂಗ್ ಸ್ಟೇಷನ್ಸ್ (ಎಎಂಎಸ್) ರಚಿಸಬಹುದು. ಇದಕ್ಕೆ ಬಳಸಬಹುದಾದ ಮಾನದಂಡಗಳೆಂದರೆ, ಸಸ್ಪೆಂಡೆಡ್ ಪರ್ಟಿಕ್ಯುಲೇಟ್ ಮ್ಯಾಟರ್ (ಎಸ್‌ಪಿಎಂ), ರೆಸ್ಪಿರೇಬಲ್ ಪರ್ಟಿಕ್ಯುಲೇಟ್ ಮ್ಯಾಟರ್ ($RPM_{<2.5}$ & $RPM_{<10}$), ಸಲ್ಫರ್‌ಡೈಆಕ್ಸೈಡ್ (SO_2), ನೈಟ್ರೋಜನ್ ಆಕ್ಸೈಡ್ (NO_x) ಕಾರ್ಬನ್ ಮಾನಾಕ್ಸೈಡ್ (CO)ಮತ್ತು ಹೈಡ್ರೋ ಕಾರ್ಬನ್ಸ್ (HC) . ವಾಯು ಗುಣಮಟ್ಟ ನಿಯಂತ್ರಣ , ನಿಗಾವನ್ನು ನಿರಂತರವಾಗಿ ಮುಂದುವರಿಸಬಹುದು.

3) ಹವಾಮಾನ ವೀಕ್ಷಣೆಗಳು

ಡ್ರೈ ಬಲ್ಬ್ ಟೆಂಪರೇಚರ್, ವೆಟ್ ಬಲ್ಬ್ ಟೆಂಪರೇಚರ್, ಗಾಳಿಯ ವೇಗ, ಗಾಳಿಯ ದಿಕ್ಕು , ಮೋಡ, ಮಳೆ ಮತ್ತು ಸೌರ ವಿಕಿರಣವನ್ನು ದಿನಂಪ್ರತಿ ದಾಖಲು ಮಾಡಬೇಕು.

ಬಿ)ನೀರು ಗುಣಮಟ್ಟ ನಿರ್ವಹಣೆ

ಯೋಜನಾ ಸ್ಥಾವರದ ಪ್ರದೇಶದಲ್ಲಿರುವ ವಿವಿಧ ಕಟ್ಟಡಗಳ ಕೊಳಚೆಯನ್ನು ಪ್ರತ್ಯೇಕ ಚರಂಡಿಗಳ ಮೂಲಕ ಕೊಳಚೆ ನಿರ್ವಹಣಾ ಪ್ಲಾಂಟ್‌ಗೆ ಸಾಗಿಸಬಹುದು. ಬಳಿಕ ರಾಜ್ಯ ಸರಕಾರದ ಮಾಲಿನ್ಯ ನಿಯಮದಂತೆ ಹಾಗೂ ಎಂಒಇಎಫ್/ಸಿಪಿಸಿಬಿ ಮಾದರಿಯಂತೆ ನೀರನ್ನು ಸಂಸ್ಕರಿಸಲು ಕಳಿಸಬಹುದು. ಸಂಸ್ಕರಿತ ನೀರನ್ನು ಗಾರ್ಡನಿಂಗ್‌ಗೆ ಮತ್ತು ಇನ್ನಿತರ ಬಳಕೆಗೆ ಉಪಯೋಗಿಸಬಹುದು.

ಸಿ) ಶಬ್ದ ಮಟ್ಟ ನಿರ್ವಹಣೆ

ಪ್ರಮುಖ ಶಬ್ದ ಉತ್ಪತ್ತಿಯ ಯಂತ್ರಗಳು ಮತ್ತು ಸಲಕರಣೆಗಳ ಯಾದಿಯಲ್ಲಿ ಸಾಧ್ಯವಾದಷ್ಟು ಕಡಿಮೆ ಶಬ್ದ ಮಾಡುವ ಸಾಮಗ್ರಿಗಳ ಅಳವಡಿಕೆಗೆ ಆದ್ಯತೆ ನೀಡಬೇಕು. ಶಬ್ದ ಮಾಲಿನ್ಯ ಉಂಟು ಮಾಡುವ ಪ್ರಮುಖ ಉಪಕರಣಗಳೆಂದರೆ
–ಸ್ಟೀಮ್ ಟರ್ಬೈನ್ ಜನರೇಟರ್
–ಇತರ ರೊಟೇಟಿಂಗ್ ಉಪಕರಣ
–ಕಂಬಸ್ಟನ್ ಇಂಡ್ಯೂಸ್ಡ್ ಶಬ್ದಗಳು
–ಫ್ಲೋ ಇಂಡ್ಯೂಸ್ಡ್ ಶಬ್ದಗಳು
–ಸ್ಟೀಮ್ ಸೇಫ್ಟಿ ವಾಲ್ವ್‌ಗಳು

ಪ್ರಸ್ತಾಪಿತ ಉಪಕ್ರಮಗಳು

ಪ್ರಸ್ತಾಪಿತ ವಿದ್ಯುತ್ ಸ್ಥಾವರದ ರೊಟೇಟಿಂಗ್ ಸಾಧನಗಳನ್ನು ಕಡಿಮೆ ಶಬ್ದ ಬರುವ ಹಾಗೆ ರೂಪಿಸಬೇಕು. ಒಟ್ಟು ಶಬ್ದ ಮಟ್ಟವು ಆಕ್ಯುಪೇಶನಲ್ ಸೇಫ್ಟಿ ಮತ್ತು ಹೆಲ್ತ್ ಅಡ್ಮಿನಿಸ್ಟ್ರೇಶನ್

(OSHA)ಸ್ಟಾಂಡರ್ಡ್‌ನ ಆವಶ್ಯಕತೆಯಂತೆ 85ರಿಂದ 90 ಡಿಬಿ(ಎ) ಮೀರದಂತೆ ನೋಡಿಕೊಳ್ಳಬೇಕು. ಅಗತ್ಯವಿದ್ದಲ್ಲೆಲ್ಲ ರೊಟೇಟಿಂಗ್ ಉಪಕರಣಗಳಿಗೆ ಸೈಲೆನ್ಸರ್‌ಗಳನ್ನು ಅಳವಡಿಸಬೇಕು. ಸಾಧ್ಯವಿರುವಲ್ಲೆಲ್ಲ ಸೂಕ್ತ ಶಬ್ದ ನಿಯಂತ್ರಕ ಮತ್ತು ಶಬ್ದ ನಿರೋಧಕಗಳನ್ನು ಒದಗಿಸಬೇಕು. ಶಬ್ದ ಸೂಸುವ ಉಪಕರಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಇನ್ಸುಲೇಶನ್ ಸಾಮಗ್ರಿಗಳನ್ನು ಬಳಸುವ ಮೂಲಕ ಅವುಗಳನ್ನು ಪ್ರತಿಬಂಧಕದಲ್ಲಿಡಬೇಕು.

8. ಪರಿಸರ ಸಂರಕ್ಷಣಾ ಉಪಕ್ರಮಗಳಿಗೆ ವೆಚ್ಚ ಪೂರೈಕೆ

ಮೇಲಿನ ವಿಭಾಗಗಳಲ್ಲಿ ಸಲಹೆ ನೀಡಲಾದಂತೆ ಪರಿಸರ ಸಂರಕ್ಷಣಾ ಕ್ರಮಗಳನ್ನು ಪಾಲಿಸಲು ಮೆಸರ್ಸ್ ಕೇರಳ ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ಪರಿಸರ ರಕ್ಷಣೆ ಮತ್ತು ಸುರಕ್ಷತಾ ಕ್ರಮಗಳಿಗಾಗಿ ಬಜೆಟ್ ಮೊತ್ತವನ್ನು ತೆಗೆದಿರಿಸಿದೆ. ಒಟ್ಟು ಯೋಜನೆಯ ಅಂದಾಜು ಮೊತ್ತವು 4756.37 ಕೋಟಿ ರೂ.ಗಳೆಂದು ನಿಗದಿಪಡಿಸಲಾಗಿದೆ. ಒಟ್ಟು ವೆಚ್ಚದ ಶೇ.30ರಷ್ಟನ್ನು (ರೂ.142 ಕೋಟಿ) ಪರಿಸರ ನಿರ್ವಹಣೆಗೆ ಮೀಸಲಿಡಲಾಗುವುದು.

9. ಉಪಸಂಹಾರ

ಇಐಎ ಅಧ್ಯಯನವು ಪ್ರಸ್ತಾಪಿತ ಯೋಜನೆಯಿಂದ ಉಂಟಾಗಬಹುದಾದ ಸಂಭವನೀಯ ಪಾರಿಸರಿಕ ಪರಿಣಾಮಗಳ ಬಗ್ಗೆ ಒಟ್ಟಾರೆ ವಿಶ್ಲೇಷಣೆ ನಡೆಸಿದೆ.

ಪರಿಣಾಮದ ಅಂದಾಜಿನ ಪ್ರಕಾರ NO_x ನ ಜಿಎಲ್‌ಸಿ ಮಟ್ಟವು ಸಿಪಿಸಿಬಿ ನಿಗದಿಪಡಿಸಿದ ಸ್ಟಾಂಡರ್ಡ್‌ನ ಮಿತಿಯೊಳಗೇ ಇದೆ. ಅದೇರೀತಿ ತ್ಯಾಜ್ಯ ರಾಶಿಯಿಂದ ಹೊರಬರುವ ಮಾಲಿನ್ಯವನ್ನು ಪೂರ್ವಾಭಿಮುಖವಾಗಿ 1 ಕಿ.ಮೀ. ವ್ಯಾಪ್ತಿಯೊಳಗಡೆ ನಿಯಂತ್ರಿಸಬಹುದು. ಅಂದಾಜಿಸಿರುವ ಜಿಎಲ್‌ಸಿ ಯನ್ನು ಬೇಸ್‌ಲೈನ್ ಮಟ್ಟಕ್ಕೆ ಸುಪರ್‌ಇಂಪೋಸ್ ಮಾಡಬಹುದು. ಯೋಜನಾ ಕಾರ್ಯಾರಂಭದ ನಂತರದ ಪ್ರಮಾಣವು ಸಿಪಿಸಿಬಿ ಮಿತಿಯೊಳಗೇ ಇರುವುದು.

ಇಎಂಪಿ ಮುಖಾಂತರ ಉಂಟಾಗಬಲ್ಲ ಪ್ರತಿಕೂಲ ಪರಿಣಾಮವನ್ನು ಆದಷ್ಟು ಕಡಿಮೆ ಮಾಡಲು ಮಿಟಿಗೇಶನ್ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ.

ಇಂಧನವಾಗಿ ಬಳಸುವ ನೈಸರ್ಗಿಕ ಅನಿಲವನ್ನು ಗೈಲ್‌ನಿಂದ ಪಡೆಯಬಹುದು. ಇದು ವಿದ್ಯುತ್ ಉತ್ಪಾದನೆಯ ಅತ್ಯಂತ ಶುದ್ಧ ತಂತ್ರಜ್ಞಾನಗಳಲ್ಲಿ ಒಂದಾಗಿದೆ. ಇದರಿಂದ ಇಂಧನ ದಹನದಿಂದ ಉಂಟಾಗುವ ಮಾಲಿನ್ಯಗಳು ಗಣನೀಯವಾಗಿ ಕಡಿಮೆಯಾಗುತ್ತವೆ.

ಕೇರಳದಲ್ಲಿ ವಿದ್ಯುತ್ ಬೇಡಿಕೆಯು ಏರುತ್ತಲೇ ಇದೆ. ರಾಜ್ಯದ ಶೇ. 50ರಷ್ಟು ವಿದ್ಯುತ್ ಬೇಡಿಕೆಯನ್ನು ರಾಜ್ಯದಲ್ಲಿರುವ ಜಲ ವಿದ್ಯುತ್ ಸ್ಥಾವರಗಳಿಂದ ಈಡೇರಿಸಲಾಗುತ್ತದೆ.

ರಾಜ್ಯದಲ್ಲಿನ ಬಹುತೇಕ ವಿದ್ಯುತ್ ಬೇಡಿಕೆಯನ್ನು ಜಲ ವಿದ್ಯುತ್ ಸ್ಥಾವರಗಳು ಈಡೇರಿಸುತ್ತಿರುವುದರಿಂದ, ಆದರೆ ಈ ಜಲವಿದ್ಯುತ್ ಸ್ಥಾವರಗಳು ವಿದ್ಯುತ್ ಉತ್ಪಾದನೆಗೆ ಮಳೆಯನ್ನೆ ಅವಲಂಬಿಸಿರುವುದರಿಂದ , ರಾಜ್ಯದ ವಿದ್ಯುತ್ ಉತ್ಪಾದನೆಯು ಮಳೆಯನ್ನೆ ಅವಲಂಬಿಸುವಂತಾಗಿದೆ. ಜತೆಗೇ ವಿದ್ಯುತ್‌ನ ಬೇಡಿಕೆ ಈಡೇರಿಸಲು ರಾಜ್ಯವು ಕೇಂದ್ರೀಯ ವಲಯವನ್ನೆ ಅವಲಂಬಿಸಿದೆ. ಮೇಲಿನ ಅಂಶಗಳನ್ನು ಪರಿಶೀಲಿಸಿ ಹಾಗೂ ರಾಜ್ಯಕ್ಕೆ ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸಲು ಕೇರಳದಲ್ಲಿ ಸೂಕ್ತವಾದ ಉಷ್ಣ ವಿದ್ಯುತ್ ಸ್ಥಾವರವೊಂದನ್ನು ಸ್ಥಾಪಿಸುವುದು ಅಗತ್ಯವಾಗಿದೆ.

ಕೇರಳವು ಐತಿಹಾಸಿಕ ಕಾರಣಗಳಿಗಾಗಿ ಕೃಷಿ ಮತ್ತು ಕೈಗಾರಿಯಲ್ಲಿ ಉತ್ತಮವಾಗಿದೆ. ವಿದ್ಯುತ್ ಯೋಜನೆಯನ್ನು ಅಳವಡಿಸುವುದರಿಂದ ಜನರಿಗೆ ಒಳ್ಳೆಯ ಮೂಲಭೂತ ಸೌಕರ್ಯ, ಶಿಕ್ಷಣ ಮತ್ತು ವೈದ್ಯಕೀಯ ಸವಲತ್ತುಗಳು ಲಭಿಸಲಿವೆ.